# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
# ಗುಬ್ಬಿ

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ ಹೆಸರು<br>ವಯಸ್ಸು<br>ಕೆಲಸ<br>ವಾಸ | ವಿರೂಪಾಕ್ಷಪ್ಪ ಎಸ್.ಎಸ್<br>ಶಿವಪ್ಪ<br>53 ವರ್ಷ<br>Taluk Surveyor<br>ಸಂಗನಹಳ್ಳಿ, ಗುಬ್ಬಿ ತಾಲ್ಲೂಕು. |
| | ಸತ್ಯ ಪ್ರತಿಜ್ಞೆಯ **ಮೇರೆಗೆ** ದಿನಾಂಕ **24.11.2025** |

## ಮುಖ್ಯ ವಿಚಾರಣೆಃ **ನ್ಯಾಯಾಲಯದಿಂದ**

ನ್ಯಾಯಾಲಯದಿಂದ ನನ್ನನ್ನು Court commissioner ಆಗಿ ನೇಮಕ ಮಾಡಿದ್ದು Warrant ಅನ್ನು ಕಾರ್ಯಗತಗೊಳಿಸುವಂತೆ ನೋಟಿಸ್ ಬಂದಿದ್ದು , ಅದರಂತೆ ಸಂಬಂಧಪಟ್ಟ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸನ್ನು ಜಾರಿ ಮಾಡಿರುತ್ತೇನೆ. ಎರಡು ಪಕ್ಷಾಗಾರರಿಗೆ ಕ್ರಯ ಪ್ರತವನ್ನು ಹಾಜರುಪಡಿಸುವಂತೆ ಮನವಿ ಮಾಡಿರುತ್ತೇನೆ. ಅದರಂತೆ ಎರಡೂ ಪಕ್ಷಾಗಾರರು ಕ್ರಯ ಪತ್ರದ ನಕಲು ಪ್ರತಿಗಳನ್ನು ನೀಡಿದ್ದರು. ನಮ್ಮ ಕಚೇರಿಯಲ್ಲಿ ಲಭ್ಯವಿದ್ದ ಸರ್ವೆ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ನಿಗದಿತ ದಿನಾಂಕದಂದು ಅಳತೆ ಮಾಡಲು ಸ್ಥಳಕ್ಕೆ ಹೋಗಿ ರುತ್ತೇನೆ. ಆ ಸಂದರ್ಭದಲ್ಲಿ ವಾದಿ ಮತ್ತು ಪ್ರತಿವಾದಿಯರು ಹಾಜರಿದ್ದರು. ಸದರಿ ಸರ್ವೆ ನಂ.27/1 ಎ ರಲ್ಲಿ ಆಕಾರ್ ನಲ್ಲಿರುವಂತೆ 20 ಗುಂಟೆ ಇರುತ್ತದೆ. ಅರದಲ್ಲಿ ಇತ್ತೀಚೆಗೆ ಪೋಡಿಯಾಗಿದ್ದು ಅದರಲ್ಲಿ ಮೂಡ್ಲಯ್ಯ ಎಂಬುವರಿಗೆ 14 ಗುಂಟೆ ಪೋಡಿಯಾಗಿರುತ್ತದೆ. ಅದರ ಹೊಸ ಸರ್ವೆ ನಂ.27/5 ಆಗಿರುತ್ತದೆ. ಉಳಿದ 6

ಗುಂಟೆ ವಾದಿಯಾದ ರೇವಣ್ಣರವರಿಗೆ ಸರ್ವೆ ನ.27/1ಎ ರಲ್ಲಿ 6 ಗುಂಟೆಯನ್ನು ಹಾಗೆಯೇ ಉಳಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಸಮಕ್ಷಮ ನಮ್ಮ ಸರ್ವೆ. ದಾಖಲಾತಿಗಳ ಟಿಪ್ಪಣಿ ಹಾಗೂ ಇಸ್ಸಾ ಟಿಪ್ಪಣಿಗಳಲ್ಲಿನ ಅಳತೆಯಂತೆ ಗಡಿಗಳನ್ನು ಗುರುತಿಸಿಕೊಂಡು ಅವುಗಳ ಆಧಾರದ ಮೇಲೆ ಸರ್ವೇ ನಂ.27/5 ರ 14 ಗುಂಟೆ ಗಡಿಯನ್ನು ಗುರುತಿಸಿರುತ್ತೇನೆ. ಅದೇ ರೀತಿ 27/1ಎ ರಲ್ಲಿ ಇರುವ 6 ಗುಂಟೆಯ ಗಡಿಯನ್ನು ಗುರುತಿಸಿ ತೋರಿಸಿರುತ್ತೇನೆ. ಈ 27/1ಎ ನಲ್ಲಿರುವ 6 ಗುಂಟೆಯಲ್ಲಿ ರೂಢಿಗತವಾಗಿ ರಸ್ತೆಯು ಬಳಕೆಯಲ್ಲಿದ್ದು ಟಾರ್ ರಸ್ತೆಯಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರು ನೀಡಿದ ಕ್ರಯ ಪತ್ರಗಳನ್ನು ಪರಿಶೀಲಿಸಿಕೊಂಡು ಅದರಲ್ಲಿ ನಮೂದಾಗಿರುವ ಚಕ್ಕುಬಂದಿಗಳನ್ನು ಸಹ ಪರಿಶೀಲಿಸಿಕೊಂಡು ಅದರಂತೆ ಪ್ರತಿವಾದಿಗಳಿಗೆ ಇರುವ 27/5 ರಲ್ಲಿನ 14 ಗುಂಟೆ ವಿಸ್ತೀರ್ಣವನ್ನು ತೋರಿಸಲಾಯಿತು. ಅದೇ ರೀತಿ 27/1ಎ ರಲ್ಲಿರುವ 6 ಗುಂಟೆಯ ಗಡಿಯನ್ನು ಕ್ರಯ ಪತ್ರದ ಚಕ್ಕುಬಂದಿಯಂತೆ ಗುರುತಿಸಿ ತೋರಿಸಲಾಯಿತು . ಅಲ್ಲಿ ಯಾವುದೇ ಒತ್ತುವರಿ ಕಂಡು ಬಂದಿರುವುದಿಲ್ಲ. ಸಾರ್ವಜನಿಕವಾಗಿ ಬಳಕೆಯಲ್ಲಿರವ ರಸ್ತೆ 27/1 ಎ ರಲ್ಲಿ ಸುಮಾರು ಮೂರುವರೆ ಗುಂಟೆಯಷ್ಟು ಬಳಕೆಯಾಗಿರುತ್ತದೆ. ಮತ್ತು 27/5 ರಲ್ಲಿ ಸದರಿ ರಸ್ತೆಗಾಗಿ ಒಂದೂವರೆ ಗುಂಟೆಯಷ್ಟು ಬಳಕೆಯಾಗಿರುತ್ತದೆ. ಈ ಮೇಲ್ಕಂಡ ವಿಚಾರವನ್ನು ವಾದಿ ಮತ್ತು ಪ್ರತಿವಾದಿಯರಿಗೆ ತಿಳಿಸಿ ಹೇಳಿಕೆ ಪಡೆದಿರುತ್ತೇನೆ. ನಕ್ಷೆ ತಯಾರು ಮಾಡಿರುತ್ತೇನೆ. ಪ್ರತಿವಾದಿ ಪರ ವಕೀಲರು ನೀಡಿರುವ ಸೂಚನೆಗೆ ಅನುಸಾರವಾಗಿ ಉತ್ತರವನ್ನು ನೀಡಿರುತ್ತೇನೆ. ಸಾಕ್ಷಿಯೂ ನಕ್ಷೆಯನ್ನು ನೋಡಿ ಗುರುತಿಸಿದ್ದು ನಿಪಿ.1, ಪ್ರತಿವಾದಿಗಳ ಪರ ವಕೀಲರು ನೀಡಿರುವ ಸೂಚನೆಗಳಿಗೆ ನೀಡಿರುವ ಉತ್ತರವನ್ನು ನಿಪಿ.2, ಹೇಳಿಕೆಯನ್ನು ನಿಪಿ.3 , 2 ನೋಟಿಸ್ಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,**
**ಗುಬ್ಬಿ**